# ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
(ಕರ್ನಾಟಕ ಸರ್ಕಾರದ ನೋಂದಾಯಿತ ಸೊಸೈಟಿ)
# Government Tool Room & Training Centre
(A Registered Society under Government of Karnataka)


ಜಿಟಿಟಿಸಿ/ವ್ಯ.ನಿ.ಕ/ಡಿಪ್ಲೋಮಾ ಪ್ರವೇಶ/ಅ/2024-25 ದಿನಾಂಕ: 03.05.2024

## ಅಧಿಸೂಚನೆ

**ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ಗಳಲ್ಲಿ 2024-25ನೇ ಸಾಲಿನ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಾತಿ ಕುರಿತು**

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC) ವು 1972ರಲ್ಲಿ ಡೆನ್ಮಾರ್ಕ್ ಸರ್ಕಾರದ ಸಹಯೋಗದೊಂದಿಗೆ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ದ್ವಿಪಕ್ಷೀಯ ಅಭಿವೃದ್ಧಿ ಸಹಕಾರ ಒಪ್ಪಂದದ ಅಡಿಯಲ್ಲಿ ಬೆಂಗಳೂರಿನ ರಾಜಾಜಿನಗರದ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಗೊಂಡಿದೆ. ಪ್ರಸ್ತುತ ರಾಜ್ಯಾದ್ಯಂತ 30 ಡಿಪ್ಲೋಮಾ ಕಾಲೇಜುಗಳನ್ನು ಹೊಂದಿದ್ದು, ಡಿಪ್ಲೋಮಾ, ಪೋಸ್ಟ್ ಡಿಪ್ಲೋಮಾ ಹಾಗೂ ಎಮ್.ಟೆಕ್ ಕೋರ್ಸುಗಳನ್ನು ನಡೆಸುವ "AICTE"ಯಿಂದ ಅನುಮೋದನೆಗೊಂಡ ಅತ್ಯುನ್ನತ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು, ರಾಜ್ಯಾದ್ಯಂತ ಸ್ಥಾಪಿಸಲಾಗಿರುವ 30 ಜಿಟಿಟಿಸಿ ಕೇಂದ್ರಗಳಲ್ಲಿ 2024-25ನೇ ಸಾಲಿನ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, **2023-24ನೇ ಸಾಲಿನ SSLC ಫಲಿತಾಂಶ ಬಿಡುಗಡೆಯಾದ ನಂತರ ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗುವುದು.** ಪ್ರವೇಶಾತಿ ಪ್ರಕ್ರಿಯೆಯು ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ "**ಕರ್ನಾಟಕ ಪರೀಕ್ಷಾ ಪ್ರಾಧಿಕಾರದ**" ಮೂಲಕ ನಡೆಸಲಾಗುವುದು.

### ಜಿಟಿಟಿಸಿ ಡಿಪ್ಲೋಮಾ ಕೋರ್ಸುಗಳು

| ಕೋರ್ಸ್ ಹೆಸರು | ವಿದ್ಯಾರ್ಹತೆ | ಅವಧಿ (ವರ್ಷ) | ಷರಾ |
|---|---|---|---|
| ಡಿಪ್ಲೋಮಾ ಇನ್ ಟೂಲ್ &ಡೈಮೇಕಿಂಗ್ (DTDM) | 10ನೇ ತರಗತಿ | 3+1* | * ಕಡ್ಡಾಯ ಒಂದು ವರ್ಷದ ಇಂಟರ್ನ್‌ಶಿಪ್ ತರಬೇತಿ |
| ಡಿಪ್ಲೋಮಾ ಇನ್ ಪ್ರಿಶಿಸನ್ ಮ್ಯಾನುಫ್ಯಾಕ್ಚರಿಂಗ್ (DPM) | 10ನೇ ತರಗತಿ | 3+1* | |
| ಡಿಪ್ಲೋಮಾ ಇನ್ ಮೆಕ್ಯಾಟ್ರಾನಿಕ್ಸ್ (DMCH) | 10ನೇ ತರಗತಿ | 3+1* | |
| ಡಿಪ್ಲೋಮಾ ಇನ್ ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ (DEE) | 10ನೇ ತರಗತಿ | 3+1* | |
| ಡಿಪ್ಲೋಮಾ ಇನ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ & ಮಶೀನ್ ಲರ್ನಿಂಗ್ (DAI&ML) | 10ನೇ ತರಗತಿ | 3+1* | |
| ಡಿಪ್ಲೋಮಾ ಇನ್ ಅಟೋಮೇಶನ್ & ರೋಬೊಟಿಕ್ಸ್ (DAR) | 10ನೇ ತರಗತಿ | 3+1* | |
| ಡಿಪ್ಲೋಮಾ ಇನ್ ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನೀಯರಿಂಗ್ (DEC) | 10ನೇ ತರಗತಿ | 3+1* | |

### ಜಿಟಿಟಿಸಿ ಡಿಪ್ಲೋಮಾ ಕಾಲೇಜಿನ ವಿಶೇಷತೆಗಳು:

1) 30% ಕ್ಲಾಸ್‌ರೂಮ್ ತರಬೇತಿ, 70% ಪ್ರಾಯೋಗಿಕ ತರಬೇತಿ
2) ಉದ್ಯಮಗಳ ಬೇಡಿಕೆಗೆ ಅನುಸಾರ ಪಠ್ಯಕ್ರಮ ರಚನೆ
3) ಸ್ಟೈಪೆಂಡ್ ಸಹಿತ ಒಂದು ವರ್ಷ ಅವಧಿಯ ಇಂಟರ್ನ್‌ಶಿಪ್
4) ಶೇಕಡಾ 100 ರಷ್ಟು ಉದ್ಯೋಗಾವಕಾಶ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:**
**ಸಹಾಯವಾಣಿ : 155267**
**ವೆಬ್‌ಸೈಟ್:** https://gttc.karnataka.gov.in
https://cetonline.karnataka.gov.in/kea

### ಜಿಟಿಟಿಸಿ ಡಿಪ್ಲೋಮಾ ಕಾಲೇಜುಗಳು-30

ಬೆಂಗಳೂರು | ಮೈಸೂರು | ಧಾರವಾಡ | ಮದ್ದೂರು | ಹಾಸನ | ಮಂಗಳೂರು | ಕಲಬುರಗಿ | ಬೆಳಗಾವಿ | ದಾಂಡೇಲಿ | ಹೊಸಪೇಟೆ | ಹರಿಹರ |ಕೂಡಲಸಂಗಮ | ಕನಕಪುರ | ಲಿಂಗಸುಗೂರು | ಗುಂಡ್ಲುಪೇಟೆ | ಕಡೂರು | ಹುಮನಾಬಾದ್ | ಕೋಲಾರ | ತುಮಕೂರು | ಶಿವಮೊಗ್ಗ | ಗೌರಿಬಿದನೂರು | ಚಿಕ್ಕೋಡಿ | ಗೋಕಾಕ | ಉಡುಪಿ | ಯಾದಗಿರಿ | ಚಿತ್ರದುರ್ಗ | ಚಳ್ಳಕೆರೆ | ಕೊಪ್ಪಳ | ದೇವನಹಳ್ಳಿ | ಮಾಗಡಿ |

**ವ್ಯವಸ್ಥಾಪಕ ನಿರ್ದೇಶಕರು**
**ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ**